# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

## ಸಿ. ಸಿ. ನಂ.386/2020

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಸೈಯದ್ ಅಜೀಮೂದ್ದಿನ | ಸಿಡಬ್ಲ್ಯೂ-01 | ಪಿಡಬ್ಲ್ಯೂ-01 |
| ತಂದೆಯ/ಗಂಡನ ಹೆಸರು | ಬಸೀರೋದ್ದಿನ ಫಕೀರ (ದರವೇಶ) | | |
| ವಯಸ್ಸು | 43 ವರ್ಷ | | |
| ಉದ್ಯೋಗ | ವ್ಯಾಪಾರ | | |
| ವಾಸ ಸ್ಥಳ | ಸೇಡಂ | | |

ದಿನಾಂಕ 27-09-2023

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಆರೋಪಿಯ ಪರಿಚಯ ನನಗೆ ಇರುತ್ತದೆ. ಒಬ್ಬ ಅಬ್ದುಲ ರಹೀಮ ಅಬ್ದುಲ ಗುಡೂ ಆಟೋವಾಲೆ ಅವರ ಮತ್ತು ನನ್ನ ಮಧ್ಯೆ ಖುಲ್ಲಾ ಜಾಗೆಯ ಸಂಬಂಧ ತಕರಾರು ನಡೆದಿರುತ್ತದೆ. ಆರೋಪಿ ಅವರ ಪರವಾಗಿ ನನ್ನನ್ನು ದಿಟ್ಟಿಸಿ ನೋಡುವುದು ಮಾಡುತ್ತಿದ್ದನು. ದಿನಾಂಕ 23.04.2020 ರಂದು ಬೆಳಗ್ಗೆ 11.00 ಗಂಟೆಗೆ ನಾನು ಸುಗರ ಗುಳಿಗೆ ತರುವುದಕ್ಕಾಗಿ ಮನೆಯಿಂದ ಮೆಡಿಕಲ್ ಗೆ ಹೊರಟಿದ್ದು ಆಗ ಚಿನ್ನುಮಿಯಾ ಇವರ ಮನೆಯ ಮುಂದುಗಡೆ ರಸ್ತೆಯ ಮೇಲೆ ಹೊರಟ್ಟಿದ್ದು ಅಲ್ಲಿ ಆರೋಪಿ ನಿಂತಿದ್ದು ಇತ್ತು. ಆಗ ಆರೋಪಿ ನನ್ನನ್ನು ದಿಟ್ಟಿಸಿ ನೋಡಿ ಫಕೀರ ಮಾಕೇ ಲೌಡೆ ತೇರಿ ಗಾಂಡ ಬರಿ ಅಬ್ದುಲ ರಹೀಮ ಕಾ ಗರ್ ಬನಾನೇ ದೇ ನೈಹಿ ತೋ ತುಜಕೆ ಜಾನಸೇ ಮಾರತಾ ಹು ಅಂತಾ ಅಂದಿರುತ್ತಾನೆ. ಅದೇ ರೀತಿ ಆರೋಪಿ ನನಗೆ ಕೈಯಿಂದ ಮತ್ತು ಕಲ್ಲಿನಿಂದ ಹೊಡೆದಿರುತ್ತಾನೆ. ಕಲ್ಲಿನಿಂದ ಆರೋಪಿ ಎಡಬದಿಯ ಕಣ್ಣಿನ ಕೆಳಗಡೆ ಹೊಡೆದಿರುತ್ತಾನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಲ್ಲನ್ನು ಗುರುತಿಸುತ್ತಾರೆ. ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಹೊಡೆದಾಗ ನನಗೆ ಗಾಯ ಆಗಿತ್ತು. ಆಗ ಅಲ್ಲಿಯೇ ಇದ್ದ ನೂರ ಶಷಾ ಮತ್ತು ಮೊಹೀಷ ಎಂಬುವವರು ಜಗಳ ನೋಡಿ ಬಿಡಿಸಿರುತ್ತಾರೆ. ನಂತರ ನಾನು ಪೊಲೀಸ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಆರೋಪಿ ಆ ದಿವಸ ನನ್ನೊಂದಿಗೆ ತಂಟೆ ಮಾಡಿರುತ್ತಾನೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಆರೋಪಿ ನನಗೆ ಕೈಯಿಂದ ಬೆನ್ನಿಗೆ ಗುದ್ದಿರುತ್ತಾನೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಎಸ್. ಆರ್. ಪಿ. ಆರೋಪಿ ಪರ ವಕೀಲರಿಂದ</u>**

ಆರೋಪಿಯ ಮನೆ ಗುಲಬರ್ಗಾ ರಸ್ತೆಯ ಪಕ್ಕ ಇರುತ್ತದೆ. ನಾನು ಹೇಳಲಾದ ಘಟನೆಯ ದಿನಾಂಕದಂದು ಲಾಕಡೌನ ಇತ್ತು ಮನೆಯಿಂದ ಯಾರು ಹೊರಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಮೆಡಿಕಲ್‌ಗೆ ಗೊಲಿ ತರಲು ಹೋಗಿರುವುದಾಗಿ ನುಡಿಯುತ್ತಾರೆ. ಆದ್ದರಿಂದ ಆರೋಪಿ ಮನೆಯಿಂದ ಹೊರಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ತಾನು ಪ್ರೆಸ್ ರಿಪೊರ್ಟರ ಇರುವುದಾಗಿ ಬಂದಿರುತ್ತಾನೆ ಎಂದು ನುಡಿಯುತ್ತಾರೆ. ನಾನು ದೂರಿನಲ್ಲಿ ಆರೋಪಿ ಪ್ರೆಸ್ ರಿಪೊರ್ಟರ ಇರುವುದಾಗಿ ಬರೆಸಿಲ್ಲ ಎಂದರೆ ಸರಿ. ಚಾಸಾ-4 ನನ್ನ ಸಂಬಂಧಿಕರು ಎಂದರೆ ಸರಿ. ಅಬ್ದುಲ ರಹೀಮ ಇವರ ಹೆಂಡತಿ ನನ್ನ ಮೇಲೆ ದೂರು ಸಲ್ಲಿಸಿದ್ದರು ಅದರಲ್ಲಿ ಆರೋಪಿ ಸಾಕ್ಷಿದಾರರು ಇದ್ದರು ಎಂದರೆ ಸರಿ. ಆ ಪ್ರಕರಣದಲ್ಲಿ ಆರೋಪಿ ಸಾಕ್ಷಿದಾರ ಇದಿದ್ದರಿಂದ ನಾನು ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿ. ಆ ಖುಲ್ಲಾ ಜಾಗ ನನ್ನದು ಇರುವುದಿಲ್ಲ ಅದನ್ನು ಕಬಳಿಸುವ ಉದ್ದೇಶದಿಂದ ನಾನು ಸಂಬಂಧಿಸಿದ ಎಲ್ಲರ ಮೇಲೆ ಪ್ರಕರಣ ದಾಖಲಿಸುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ಮಸ್ಜಿದ ಪಕ್ಕದಲ್ಲಿ ಚಿನ್ನುಮಿಯಾ ಇವರ ಮನೆ ಇರುತ್ತದೆ ಎಂದರೆ ಸರಿಯಲ್ಲ. ಅಲ್ಲಿ ಹಿಂದೂ ಇವರ ಮನೆಗಳು ಇರುತ್ತವೆ ಎಂದರೆ ಸರಿಯಲ್ಲ. ಅಲ್ಲಿ ಹಿಂದೂ ಜನರು ಸಾಕಷ್ಟು ಇದ್ದರೂ ಸಹ ನಾನು ನನಗೆ ಬೇಕಾದವರ ಹೆಸರನ್ನು ಸಾಕ್ಷಿದಾರರನ್ನಾಗಿ ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಕೈಯಿಂದ ಮತ್ತು ಕಲ್ಲಿನಿಂದ ಹೊಡೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೂ ಈ ಪ್ರಕರಣಕ್ಕೂ ಏನು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಂತೆ ಇರುವ ಕಲ್ಲುಗಳು ಸಾಕಷ್ಟು ದೊರೆಯುತ್ತವೆ ಎಂದರೆ ಸರಿ. ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಾಗಿ, ಜೀವ ಬೆದರಿಕೆ ಹಾಕಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿವಸ ಯಾವುದೇ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಖೊಟ್ಟಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH